

# ಈಶಾನ್ಯ ದಿಕ್ಕಿನ ಸೂಕ್ಷ್ಮ ಸಮಸ್ಯೆ ಹೇಳುವ ಅನೇಕ್

■ ವಿಶಾಖ ಎನ್.

'ಅನೇಕ್' ಹಿಂದಿ ಚಿತ್ರದಲ್ಲಿ ಆಯುಷ್ಮಾನ್ ಖುರಾನಾ ತಮ್ಮ ಪ್ರಯೋಗಮುಖಿ ಧೋರಣೆಯನ್ನು ಮುಂದುವರಿಸಿರುವುದು ಸ್ಪಷ್ಟವಾಗಿದೆ. ಸೇನೆ ಅಧಿಕಾರಿ ಪಾತ್ರದಲ್ಲಿ ಅವರು ಕಾಣಿಸಿಕೊಂಡಿದ್ದಾರೆ. ಅನುಭವ್ ಸಿನ್ಹ ಈಶಾನ್ಯ ಭಾರತದ ಸಮಾಜೋ–ರಾಜಕೀಯ ಸಮಸ್ಯೆಯೊಂದರ ಎಳೆಯನ್ನು ಇಟ್ಟುಕೊಂಡು ಈ ಚಿತ್ರವನ್ನು ನಿರ್ದೇಶಿಸಿದ್ದಾರೆ.

ಹೋದ ವರ್ಷದ ಪ್ರಾರಂಭದಲ್ಲೇ ಸಿನಿಮಾದ ಚಿತ್ರೀಕರಣ ಪ್ರಾರಂಭವಾಗಿತ್ತಾದರೂ ಕೋವಿಡ್ ಅಲೆಗಳ ಕಾರಣದಿಂದಾಗಿ ಬಿಡುಗಡೆ ವಿಳಂಬವಾಯಿತು. ಮೇ 27ರಂದು ಸಿನಿಮಾ ತೆರೆಕಾಣಲಿದೆ.

'ಆರ್ಟಿಕಲ್ 15', 'ಮುಲ್ಕ್' ಹಾಗೂ 'ಥಪ್ಪಡ್' ಹಿಂದಿ ಚಿತ್ರಗಳಲ್ಲಿ ಸೂಕ್ಷ್ಮಾತಿಸೂಕ್ಷ್ಮ ಸಮಸ್ಯೆಗಳನ್ನು ನಾಜೂಕಾಗಿ ಕಟ್ಟಿಕೊಟ್ಟ ಅನುಭವ್ ಸಿನ್ಹ ಇಲ್ಲಿ ಕೆಲವು ಪದರಗಳಲ್ಲಿ ನಾಯಕನ ಪಾತ್ರವನ್ನು ಕಟ್ಟಿಕೊಟ್ಟಿದ್ದಾರೆ.



'ನನ್ನ ವೃತ್ತಿ ಬದುಕಿನಲ್ಲಿಯೇ ಇದುವರೆಗೆ ಬೇಕಾಗಿರದ ಕೆಲವನ್ನು ಈ ಪಾತ್ರ ಬೇಡಿತು. ದೈಹಿಕವಾಗಿ, ಮಾನಸಿಕವಾಗಿ ಅದಕ್ಕಾಗಿ ಸಾಕಷ್ಟು ಸಜ್ಜಾದೆ. ಇಂತಹುದೊಂದು ದೊಡ್ಡ ಯೋಚನೆಯನ್ನು ಸಿನಿಮಾ ಮಾಡಿದ ಅನುಭವ್ ಸಿನ್ಹ ಅವರ ಬದ್ಧತೆಗೆ ಶರಣೆಂಬೆ' ಎಂದು ಆಯುಷ್ಮಾನ್ ಖುರಾನಾ ಪ್ರತಿಕ್ರಿಯಿಸಿದರು.

ಅನುಭವ್ ಕೂಡ ಇಡೀ ದೇಶದಲ್ಲಿ ಹೆಚ್ಚು ಚರ್ಚೆಗೆ ಒಳಗಾಗದ ವಸ್ತುವನ್ನು ಎತ್ತಿಕೊಂಡು ಸಿನಿಮಾ ಮಾಡಿದ ಕುರಿತು ಹೆಮ್ಮೆ ವ್ಯಕ್ತಪಡಿಸಿದರು. ದೀಪಿಕಾ ದೇಬಾ ಈ ಚಿತ್ರದಲ್ಲಿ ಬಾಕ್ಸರ್ ಪಾತ್ರವನ್ನು ನಿರ್ವಹಿಸಿದ್ದಾರೆ. ಡ್ಯಾನಿ ಡೆಂಗ್ಝೋಂಗ್‌ಪಾ ಹಾಗೂ ಮನೋಜ್ ಪಹ್ವಾ ಕೂಡ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ■

## 'ನನ್ನನ್ನು ಸಂಭಾಳಿಸಲು ಬಾಲಿವುಡ್‌ಗೆ ಆಗದು'

ದಕ್ಷಿಣ ಭಾರತದ ಸ್ಟಾರ್ ನಟರೀಗ ಬಾಲಿವುಡ್ ಮೇಲೆ ಮುರಿದುಕೊಂಡು ಬೀಳತೊಡಗಿದ್ದಾರೆ. 'ಆರ್‌ಆರ್‌ಆರ್', 'ಕೆಜಿಎಫ್2' ಸಿನಿಮಾಗಳ ಗಳಿಕೆಯ ಸಂಚಲನದಿಂದ ಸಿಕ್ಕಿರುವ ಆತ್ಮವಿಶ್ವಾಸ ಇದಕ್ಕೆ ಒಂದು ಕಾರಣವಾದರೆ, ಇನ್ನೊಂದು ಮಾರುಕಟ್ಟೆ ವಿಸ್ತರಣೆಯಿಂದ ಪ್ರಾದೇಶಿಕ ಭಾಷಾ ಚಿತ್ರಗಳ ಮೇಲೆ ಹುಟ್ಟಿರುವ ಅಭಿಮಾನ.

ಅಡವಿ ಶೇಷ ಅವರ 'ಮೇಜರ್' ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ತೆಲುಗು ಸ್ಟಾರ್ ಮಹೇಶ್ ಬಾಬು, 'ಬಾಲಿವುಡ್‌ಗೆ ನನ್ನ ಡೇಟ್ಸ್‌ಗೆ ಆಗುವಷ್ಟು ಖರ್ಚು ಭರಿಸಲಾಗದು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಬಾಲಿವುಡ್ ಸಿನಿಮಾಗಳಲ್ಲಿ ಅವಕಾಶ ಸಿಗುತ್ತಿದೆಯೇ ಎಂಬ ಪ್ರಶ್ನೆಗೆ ಅವರು ಇಂಗ್ಲಿಷ್‌ನಲ್ಲಿ ಹೇಳಿದ್ದು– 'ಬಾಲಿವುಡ್ ಕಾಂಟ್ ಅಫೋರ್ಡ್ ಮಿ' ಎಂದು.

ದಕ್ಷಿಣ ಭಾರತದ ಜನಪ್ರಿಯ ನಟನ ಈ ಆತ್ಮಾಭಿಮಾನದ ಮಾತನ್ನು ಬಾಲಿವುಡ್ ಸಿನಿಮಾ ನಿರ್ದೇಶಕ ಮುಕೇಶ್ ಭಟ್ ಒಪ್ಪಿದ್ದಾರೆ. 'ಎಲ್ಲ ನಟರಿಗೂ ತಮ್ಮದೇ ಆದ ಮಾರ್ಗವಿರುತ್ತದೆ. ಎಲ್ಲರೂ ತಾವು ಇಷ್ಟಪಡುವ ನಿರ್ದೇಶಕರ ಜತೆಗೆ ಕೆಲಸ ಮಾಡುತ್ತಾರೆ. ಮಾರುಕಟ್ಟೆಯಲ್ಲಿನ ತಮ್ಮ ಬೇಡಿಕೆಗೆ ತಕ್ಕಂತೆ ಸಂಭಾವನೆಯನ್ನೂ ಗೊತ್ತುಪಡಿಸಿಕೊಳ್ಳುತ್ತಾರೆ. ಕೆಲವರು ತಮ್ಮ ನೆಚ್ಚಿನ ನಿರ್ದೇಶಕರಿಗೆ ಕಡಿಮೆ ಸಂಭಾವನೆ ಪಡೆದು ನಟಿಸುವುದನ್ನೂ ಕಂಡಿದ್ದೇನೆ. ಮಹೇಶ್ ಬಾಬು ಹೆಸರು ಮಾಡಿರುವ ನಟ. ಅವರಿಗೆ ತಮಗೆ ಅನಿಸಿದ್ದನ್ನು ತಮಗೆ ಆದ ಅನುಭವವನ್ನು ಹೇಳುವ ಸ್ವಾತಂತ್ರ್ಯವಿದೆ. ಅದರಲ್ಲಿ ತಪ್ಪೇನೂ ಇಲ್ಲ' ಎಂದು ಮುಕೇಶ್ ಪ್ರತಿಕ್ರಿಯಿಸಿದರು.

'ಸರ್ಕಾರಿ ವಾರಿ ಪಾಠ' ತೆಲುಗು ಚಿತ್ರ ತೆರೆಕಂಡಿದ್ದು, ಮಹೇಶ್ ಬಾಬು ಮತ್ತೆ ಲಯ ಕಂಡುಕೊಳ್ಳುವ ವಿಶ್ವಾಸದಲ್ಲಿ ಇದ್ದಾರೆ. 'ಹಿಂದಿ ಚಿತ್ರಗಳಲ್ಲಿ ಅಭಿನಯಿಸಲು ಆಹ್ವಾನ ಕೋರಿ ಕೆಲವು ಬೇಡಿಕೆಗಳು ಬಂದಿದ್ದವು. ನಾನು ಹೇಳಿದ ಸಂಭಾವನೆಗೆ ಅಂತಹ ಯಾವ ಅವಕಾಶಗಳೂ ಒಪ್ಪಿಗೆ ನೀಡಲಿಲ್ಲ' ಎನ್ನುವುದು ಮಹೇಶ್ ಅನುಭವ ನುಡಿ. ಮಹೇಶ್ ಅಭಿಪ್ರಾಯ ಹೊಮ್ಮಿದ ಮೇಲೆ ಸಾಮಾಜಿಕ ಜಾಲತಾಣಗಳಲ್ಲಿ ಬಿಸಿಬಿಸಿ ಚರ್ಚೆ ನಡೆಯುತ್ತಿದೆ. ■

